ಓ.ಎಸ್.ನಂ.36/2017

ಪಿ ಡಬ್ಲ್ಯೂಃ 2

ದಿನಾಂಕ 24.06.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

**ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ವಕೀಲರಿಂದಃ**

ಈ ದಾವೆಯ ಕುರಿತು ಮಾಹಿತಿ ಇರುತ್ತದೆ. ದಾವಾ ಆಸ್ತಿಯ ಮೂಲ ಮಾಲಿಕರು ವಾದಿಗಳಾಗಿರುತ್ತಾರೆ. ಆ ಕುರಿತು ದಾನ ಪತ್ರದ ದಾಖಲೆಗಳನ್ನು ನೋಡಿರುತ್ತೇನೆ. ಸದರಿ ದಾಖಲೆಯನ್ನು ನಾನು ನನ್ನ ಮನೆಯಲ್ಲಿ 10 ವರ್ಷಗಳ ಹಿಂದೆ ನೋಡಿರುತ್ತೇನೆ. ಸದರಿ ದಾಖಲೆಯನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ದಾನ ಪತ್ರದ ಮೂಲ ದಾಖಲೆ ವಾದಿಗಳ ಬಳಿ ಇರುತ್ತದೆ.

2. ವಾದಿಗಳು ದಾನ ಪತ್ರದ ಆಧಾರದ ಮೇಲೆ ಮಾಲಿಕರು ಅಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ಆಸ್ತಿಯನ್ನು ನೋಡಿರುವುದಿಲ್ಲ. ಪ್ರತಿವಾದಿಗಳ ಕುಟುಂಬದ ಆಸ್ತಿಗಳ ಮತ್ತು ಯಾವ ರೀತಿ ಮಾಲಿಕರಾಗಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ಪ್ರಕರಣದ ಪ್ರತಿವಾದ ಪತ್ರದ ಬಗ್ಗೆ ಮಾಹಿತಿ ಇರುತ್ತದೆ. ದಾವಾ ಆಸ್ತಿಯು ಪ್ರತಿವಾದಿಗಳಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ.

3. ದಾವಾ ಆಸ್ತಿಯು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿ ಆಗಿದ್ದು ಸರ್ಕಾರದಿಂದ ರೀ-ಗ್ರಾಂಟ್ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ದಾವಾ ಆಸ್ತಿಯ ಚೆಕ್ಕ ಬಂದಿ ಕೇಳಿದ್ದು ವಾದ ಪತ್ರದಲ್ಲಿ ಕಾಣಿಸಿರು ಚೆಕ್ ಬಂದಿಯನ್ನು ನುಡಿದಿರುತ್ತಾರೆ. ಸದರಿ ಚೆಕ್ ಬಂದಿ ಸುಳ್ಳಿನಿಂದ ಕೂಡಿದ್ದು ಸದರಿ ಚೆಕ್ ಬಂದಿಯಲ್ಲಿ ದಾವಾ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯ ತಮ್ಮನ ಜೋತೆ ದನ ಕುರಿ ವ್ಯಾಪಾರ ಮಾಡಲು ಹೋಗುತ್ತೇನೆ ಎಂದರೆ ಸರಿಯಲ್ಲ. ನಾನು 3 ನೇ ವಾದಿಯ ಮಗ ರಾಜಣ್ಣನ ಆತ್ಮಿಯ ಸ್ನೇಹಿತ ಎಂದರೆ ಸರಿಯಲ್ಲ. ದಾವಾ ಆಸ್ತಿ ವಾದಿಯರಿಗೆ ಯಾವುದೇ ರೀತಿಯಲ್ಲಿ ಸಂಬಂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಆಸ್ತಿಯ ಕಬ್ಜಾದಲ್ಲಿ ಇದ್ದರೂ ಸಹ ವಾದಿಗಳು ಕಬ್ಜಾ ಇರುವುದಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ಆಸ್ತಿಯ ಸರ್ವೆ ನಂ 5/6 2 ಎಕರೆ 8 ಗುಂಟೆ ವಿಸ್ತಿರ್ಣ ಆಗಿರುತ್ತದೆ. ಸದರಿ ಆಸ್ತಿಯು ನನ್ನ ಅಜ್ಜನ ಹೆಸರಿನಲ್ಲಿ ಇರುತ್ತದೆ. ನನ್ನ ಅಜ್ಜ ಈಗ ಮರಣ ಹೊಂದಿರುತ್ತಾರೆ. ಆ ರೀತಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಲಾವಣಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಲಾವಣಿ ನೀಡಿ ದನ ಮತ್ತು ಕುರಿ ವ್ಯಾಪಾರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಈ ಮೇಲಿನ ಪಾಟೀ ಸವಾಲನ್ನು 4 ರಿಂದ 6 ನೇ ಪ್ರತಿವಾದಿಗಳು ಅಳವಡಿಸಿಕೊಂಡಿರುತ್ತಾರೆ**

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.

ಓ ಹೇ ಕೆ ಸರಿ ಇದೆ.

ನನ್ನ ಸಮಕ್ಷಮ

Sd/-

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.